ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-1 Issue 4, Jan-Feb 2020, 34-39**
**©*IIMRD*, Mysuru**

IIMRD JOURNALS
**www.iimrd.com**

# ಮೈಸೂರು ಸ್ವಾತಂತ್ರ್ಯ ಹೋರಾಟದಲ್ಲಿ ಶಿವಪುರ ಧ್ವಜ ಸತ್ಯಾಗ್ರಹ: ಒಂದು ಅವಲೋಕನ

**ಡಾ. ಎನ್. ಬಿಳಿಗಿರಿ**[1]

**ಪೀಠಿಕೆ**

ಮೈಸೂರು ಇತಿಹಾಸದಲ್ಲಿ ಏಪ್ರಿಲ್ 11, 1938 ಚಿರಸ್ಮರಣೀಯವಾದದು. ಏಕೆಂದರೆ ಮಂಡ್ಯ ಜಿಲ್ಲೆಯ ಶಿಂಷಾ ನದಿತೀರದ ಶಿವಪುರದಲ್ಲಿ ಸಾವಿರಾರು ಸತ್ಯಾಗ್ರಹಿಗಳಿಗೆ ಸ್ಫೂರ್ತಿ ನೀಡಿದ, ಮೈಸೂರಿನ ಇತಿಹಾಸವನ್ನೇ ಬದಲಾಯಿಸಿದ, ಮೈಸೂರು ಜನರ ಶಕ್ತಿ ಸಾಮರ್ಥ್ಯ, ದಕ್ಷತೆ, ದೇಶಪ್ರೇಮ, ಸಂಘಟನಾ ಶಕ್ತಿಯನ್ನು ಇಡೀ ದೇಶಕ್ಕೆ ಪ್ರದರ್ಶಿಸಿದ ಹಾಗೂ ಚಳುವಳಿಗಳಲ್ಲಿ ಮೈಸೂರಿಗೆ ವಿಶಿಷ್ಟ ಸ್ಥಾನವನ್ನು ದೊರಕಿಸಿಕೊಟ್ಟ ದಿನ.[1]

ಶಿವಪುರ ಸತ್ಯಾಗ್ರಹ ಪ್ರಾಥಮಿಕವಾಗಿ ಕಾಂಗ್ರೆಸ್ ತನ್ನ ರಾಜಕೀಯ ಅಸಮಾಧಾನವನ್ನು ಗ್ರಾಮೀಣರ ಆರ್ಥಿಕ ಅತೃಪ್ತಿಯೊಂದಿಗೆ ಜೋಡಿಸುವ ಉದ್ದೇಶಿತ ಒಂದು ಯೋಜನೆ. ಹಾಗಾಗಿ ಅದು ಸರ್ಕಾರದ ಸವಾಲಿಗೆ ಉತ್ತರಿಸಲು ಶಿವಪುರವನ್ನೇ ಆಯ್ದುಕೊಂಡಿತು. ಇದರ ಆಯ್ಕೆಯ ಹಿಂದೆ ಎರಡು ಉದ್ದೇಶಗಳಿದ್ದವು ಒಂದು ಗ್ರಾಮಾಂತರ ಭಾಗದಲ್ಲಿ ಸುಪ್ತವಾಗಿದ್ದ ಅಗಾಧ ಶಕ್ತಿಯನ್ನು ಸಕ್ರೀಯಗೊಳಿಸಿ ನಿರಂಕುಶ ಸರ್ಕಾರವನ್ನು ಮಣಿಸುವುದು. ಎರಡನೇಯದು ಈಗಾಗಲೇ ಜಾಗೃತಗೊಂಡಿದ್ದ ರಾಜಕೀಯ ಪ್ರಜ್ಞೆಗೆ ಸಾಕ್ಷಿಯಾಗಿ 1931–32ರಲ್ಲಿ ಇರ್ವಿನ್ ನಾಲಾ ರೈತ ಚಳವಳಿಯ ಮೂಲಕ ಗಮನ ಸೆಳೆದಿದ್ದ; ಸರ್ಕಾರದ ಭೂಕಂದಾಯ ಮತ್ತು ನೀರಾವರಿ ನೀತಿಯಿಂದ ಈ ಭಾಗದ ರೈತರಲ್ಲಿ ಅಗಾಧವಾಗಿ ಉಳಿದಿದ್ದ ಅತೃಪ್ತಿಯನ್ನು ಸುಲಭವಾಗಿ ಸಂಘಟನಾತ್ಮಕ ರೂಪ ಪಡೆಯಬಲ್ಲದೆಂಬುದಾಗಿತ್ತು. ಇದಕ್ಕೆ ಪೂರಕವಾಗಿ ರೈತ ಮುಂದಾಳುಗಳೇ ಈ ಅಧಿವೇಶನದ ಸಂಘಟನೆಯಲ್ಲಿ ಸಕ್ರೀಯವಾಗಿ ದುಡಿದರು.[2]

ತದನಂತರ ಶಿವಪುರದಲ್ಲಿ ಸಿದ್ಧತೆಯು ಭರದಿಂದ ನಡೆಯಿತು ಸಂಸ್ಥಾನದಾದ್ಯಂತ ಜನರಿಗೆ ವಿಷಯವನ್ನು ತಿಳಿಸಲು ಪ್ರಕಟಣೆಗೆ ಹೆಚ್ಚು ಗಮನ ಕೊಟ್ಟು ವಿಶ್ವ ಕರ್ನಾಟಕ, ಸಂಯುಕ್ತ ಕರ್ನಾಟಕ, ತಾಯಿನಾಡು, ಹಿಂದೂ ಪತ್ರಿಕೆಗಳು ಹಾಗೂ ಇನ್ನೂ ಮುಂತಾದ ಪತ್ರಿಕೆಗಳು ಪ್ರಕಟಿಸಿದವು. ಈ ಪ್ರಕಟಣೆಯಲ್ಲಿ ಹಿಂದಿ ರಾಷ್ಟ್ರೀಯ ಮಹಾಸಭೆಗಳು ಹಾಗೂ ಮೈಸೂರು ಕಾಂಗ್ರೆಸ್‌ನ ಸಭಾಸದಸ್ಯರಾದ 18 ವರ್ಷತುಂಬಿದ ಸ್ತ್ರೀ–ಪುರುಷರೆಲ್ಲರೂ ಶಿವಪುರ ರಾಷ್ಟ್ರಕೂಟದ ಪ್ರತಿನಿಧಿಗಳಾಗಬಹುದು. ಇವರ ಶುಲ್ಕ ಒಂದು ರೂಪಾಯಿದ್ದು ಮಾರ್ಚ್ 31ರ ಒಳಗಾಗಿ ಮೈಸೂರು ಕಾಂಗ್ರೆಸ್‌ನ ಕಛೇರಿಗೆ ಆ ಹಣವು ಮುಟ್ಟಬೇಕು ಎಂದು ತಿಳಿಸಿ ಅಧ್ಯಕ್ಷರ ಆಯ್ಕೆ ನಡೆಯಿತು. ದಾಸಪ್ಪನವರನ್ನು ಹಿಂದಿಕ್ಕಿ ಬಹುಮತದಿಂದ

---

[1] *ಅತಿಥಿ ಉಪನ್ಯಾಸಕರು, ಇತಿಹಾಸ ವಿಭಾಗ, ಮಹಾರಾಜ ಕಾಲೇಜು, ಮೈಸೂರು.*

ಟಿ.ಸಿದ್ಧಲಿಂಗಯ್ಯನವರು ಅಧ್ಯಕ್ಷರಾಗಿಯೂ ಮತ್ತು ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಚನ್ನಯ್ಯನವರು ಆಯ್ಕೆಯಾದರು.[3]

ದಿನಾಂಕ 10 ಏಪ್ರೀಲ್ 1938ರ ಬೆಳಿಗ್ಗೆ ಮತ್ತು ಹಿಂದಿನ ರಾತ್ರಿ ಶಿವಪುರ ಒಂದು ಯಾತ್ರಸ್ಥಳದಂತೆ ಭಾಸವಾಗುತಿತ್ತು. ಸಾವಿರಾರು ಜನ ಸುತ್ತಮುತ್ತಲ ಊರುಗಳಿಂದ ಕಾಲ್ನಡಿಗೆ ಹಾಗೂ ಎತ್ತಿನ ಗಾಡಿಗಳಿಂದ ಬಂದು ಸೇರಿದ್ದರು.[4] ಇವರಲ್ಲಿ ಒಕ್ಕಲಿಗರು, ಕುರುಬರು, ಹರಿಜನರು, ಲಿಂಗಾಯಿತರು ಹೆಚ್ಚು ಕಂಡುಬಂದು ಇವರ ಜೊತೆಗೆ ಎಲ್ಲಾ ಜಾತಿ ಜನಾಂಗದವರು ಸಡಗರದಿಂದ ಗುಂಪು–ಗುಂಪಾಗಿ ಶಿವಪುರಕ್ಕೆ ಬಂದರು.[5] ಮೈಸೂರು ಸಂಸ್ಥಾನದ ಶಿವಪುರದಲ್ಲಿ ಯುವಜನ ಸಮ್ಮೇಳನ ದೊಡ್ಡ ಪ್ರಮಾಣದಲ್ಲಿ ನಡೆದು ನಂಜನಗೂಡಿನ ಕೆ.ವಿಶ್ವೇಶ್ವರಗೌಡರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದು, ಹೆಚ್.ಸಿ.ದಾಸಪ್ಪನವರು ಉದ್ಘಾಟಿಸಿದರು ಹಾಗೂ ತಗಡೂರು ರಾಮಚಂದ್ರರಾಯರು ಅಧ್ಯಕ್ಷರಾಗಿದ್ದು ಅನೇಕ ಯುವಜನರು ಸಕ್ರಿಯವಾಗಿ ಭಾಗವಹಿಸಿ ತಮಗಿರುವ ಸ್ವಾತಂತ್ರ್ಯ ಪ್ರೇಮವನ್ನು ಅದಕ್ಕಾಗಿ ಮಾಡಬೇಕಾಗಿರುವ ತ್ಯಾಗ ಬಲಿದಾನಗಳನ್ನು ದೇಶದ ಸ್ಥಿತಿಗತಿಗಳ ಸ್ಪಷ್ಟ ಚಿತ್ರಣವನ್ನು ಮಹಾಜನತೆಯ ಮುಂದೆ ಅಭಿವ್ಯಕ್ತಿಸಿದರು. ಪ್ರತಿಯೊಬ್ಬ ಯುವಕನು ಸತ್ಯಾಗ್ರಹ ಸಮರಕ್ಕೆ ಸೇರಿ ಸರ್ಕಾರದ ಕ್ರೂರ ಅಸ್ತ್ರಗಳಿಗೆ ತುತ್ತಾಗಬೇಕು, ಪ್ರಾಣವನ್ನು ಆಹುತಿಯಾಗಿ ಕೊಡಬೇಕು ಈ ತ್ಯಾಗದ ಬಲದಿಂದಲಾದರೂ ಜವಾಬ್ಧಾರಿ ಸರ್ಕಾರವನ್ನು ಪಡೆಯಬೇಕು.[6]

ಶಿವಪುರದಲ್ಲಿ ಅಧ್ಯಕ್ಷರ ಮೆರವಣಿಗೆ ಸುವ್ಯವಸ್ಥಿತವಾಗಿ ವರ್ಣರಂಜಿತವಾಗಿ ನಡೆಯಿತು. ರಥವು ವಿಶೇಷವಾಗಿ ಎರಡು ಗಾಲಿಯ ಜೊಡೆತ್ತಿನ ಗಾಡಿಯಲ್ಲಿ ಶಿಸ್ತಿನಿಂದ ಅಹಿಂಸೆ ಮತ್ತು ಸತ್ಯಗಳ ಸೂಕ್ತಿಗಳು ಎದ್ದುಕಾಣುವ ಫಲಕಗಳು ಇದ್ದವು. ಡೋಲು, ನಗಾರಿ ಜೊತೆಗೆ ಶಿಸ್ತಿನಿಂದ ಸಾಗುವ ಸ್ವಯಂ ಸೇವಕರಿದ್ದರು. ಸುಮಾರು 20–30 ಸಾವಿರಕ್ಕೂ ಜನ ಸಮೂಹ ಸೇರಿದ್ದು ಎಲ್ಲಾ ಕಡೆಗಳಿಂದ ತಳಿರು ತೋರಣಗಳು ಕಂಗೊಳಿಸುತ್ತಿದ್ದವು. ಪ್ರತಿಯೊಂದು ಮನೆಯವರೂ ಹಾರ ಅರ್ಪಿಸುತ್ತಿದ್ದರು 'ಏನೇ ಬರಲಿ ಒಗ್ಗಟ್ಟಿರಲಿ', 'ಮಹಾತ್ಮಗಾಂಧೀಕಿ ಜೈ', 'ಕಾಂಗ್ರೆಸ್‌ಗೆ ಜಯವಾಗಲಿ', 'ಸರ್ಕಾರದ ದಬ್ಬಾಳಿಕೆ ಅಳಿಯಲಿ', 'ಬೋಲೋ ಭಾರತ್ ಮಾತಾಕೀ ಜೈ' ಮೊದಲಾದ ಘೋಷಣೆ ಕೇಳಿ ಬರುತ್ತಿದ್ದವು. ಜನರೆಲ್ಲ ಶಾಂತಿಯಿಂದ ಯಾವ ಗಲಾಟೆಗೂ ಅವಕಾಶ ಕೊಡದಂತೆ ನಡೆಸಿಕೊಳ್ಳಬೇಕೆಂದು ಪ್ರಾರ್ಥಿಸಿ ಜನರಿಗೆ ವಂದಿಸಿದರು.

ಶಿವಪುರ ರಾಷ್ಟ್ರಕೂಟ ಬೆಳವಣಿಗೆಯನ್ನು ಸರ್ಕಾರ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದು ಶಿವಪುರಕ್ಕೆ ಬರುತ್ತಿದ್ದ ಜನ ಪ್ರವಾಹ ಸರ್ಕಾರ ಧೋರಣೆಗೆ ಸವಾಲಿನಂತಿತ್ತು. ರಾಷ್ಟ್ರಕೂಟದಲ್ಲಿ ಧ್ವಜಾರೋಹಣ ಪ್ರಧಾನ ಕಾರ್ಯವಾಗಿದುದ್ದರಿಂದ ಕಾನೂನಿನ ನೆಪದಿಂದ ಅದನ್ನು ತಡೆಗಟ್ಟಿ ವಿಫಲವಾಗುವಂತೆ ಮಾಡಲು ಸರ್ಕಾರ ಯೋಚಿಸಿತು. ಅಧ್ಯಕ್ಷರ ಮೆರವಣಿಗೆ ಮುಗಿಯುತ್ತಿದ್ದಂತೆಯೇ ಏಪ್ರಿಲ್ 11 ರಂದು ನಡೆಯಬೇಕಿದ್ದ ಬಹಿರಂಗ ಸಭೆಗೆ ಎಲ್ಲಾ ಏರ್ಪಾಡುಗಳಾಗಿ ಅಧಿವೇಶನದ ಯಾವ ಅಶಾಂತಿಗೂ ಅವಕಾಶ ಇಲ್ಲದಂತೆ ಸುಗಮವಾಗಿ ನಡೆಯಲು ಏರ್ಪಾಡಾಗಿತ್ತು. ಅದುವರೆಗೂ ಇರದಿದ್ದ ಪೋಲಿಸ್ ಅಧಿಕಾರಿಗಳು ಮತ್ತು ರಿಸರ್ವ್ ಪೋಲಿಸ್‌ನವರು ಧಾವಿಸಿದರು.[7] ಮೈಸೂರು ಪೋಲಿಸ್ ನಿಬಂಧನೆ

39ನೆಯ ಸೆಕ್ಷನ್ ಪ್ರಕಾರ ಮೈಸೂರು ಜಿಲ್ಲಾ ನ್ಯಾಯಾಧೀಶರು ಒಂದು ಆಜ್ಞೆ ಹೊರಡಿಸಿ ಒಂದು ತಿಂಗಳುಗಳ ಕಾಲ ಶಿವಪುರ ಹಾಗೂ ಅದರ ಎರಡೂ ಮೈಲಿ ಸುತ್ತಳತೆಯಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಕೂಡದೆಂದು ತಿಳಿಸಿದರು. ಈ ಆಜ್ಞೆಯನ್ನು ಪೋಲಿಸ್ ಅಧಿಕಾರಿಗಳು ಕಾಂಗ್ರೆಸ್ ಅಧ್ಯಕ್ಷರು ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತಿತರ ನಾಯಕರ ಮೇಲೆ ಜಾರಿ ಮಾಡಿದರು. ಆಗ ಸಂದಿಗ್ಧ ಪರಿಸ್ಥಿತಿ ಒದಗಿ ಕುತೂಹಲ ವಾತಾವರಣ ಉಂಟಾಯಿತು. ಸರ್ಕಾರದ ಈ ಕಾರ್ಯವು ಜನರ ದೇಶಾಭಿಮಾನವನ್ನು ಮತ್ತು ಭಾರತದ ರಾಷ್ಟ್ರಧ್ವಜದಲ್ಲಿ ಅವರಿಗಿದ್ದ ಅಭಿಮಾನವನ್ನು ಅಪಮಾನಗೊಳಿಸಿದಂತಾಯಿತು. ಜನರಲ್ಲಿ ಉತ್ಪನ್ನವಾದ ಅಸಮಾಧಾನದ ಚಂಡಮಾರುತದ ಮಹಾ ರಭಸದ ಮುಂದೆ ಪ್ರತಿಬಂಧಿಕಾಜ್ಞೆಯು ಧೂಳಿಪಟವಾಗಿ ಬಿಟ್ಟಿತು.[8]

ಈ ಆಜ್ಞೆಯನ್ನು 25 ಜನ ಮುಖಂಡರ ಮೇಲೆ ಪ್ರಯೋಗಿಸಲಾಯಿತು. ಅವರಲ್ಲಿ ಹೆಚ್.ಸಿ.ದಾಸಪ್ಪ, ಕೆ.ಟಿ.ಭಾಷ್ಯಂ, ಎಂ.ಎನ್.ಜೋಯಿಷ್, ಟಿ.ಸಿದ್ಧಲಿಂಗಯ್ಯ, ಈರಣ್ಣಗೌಡ, ಬಂಧಿಗೌಡ, ಎಸ್.ಚನ್ನಯ್ಯ, ಸೀತಾರಾಮಶಾಸ್ತ್ರಿ, ಟಿ.ಮರಿಯಪ್ಪ, ತಗಡೂರು ರಾಮಚಂದ್ರರಾಯರು ಮತ್ತು ಕೆ.ಸಿ.ರೆಡ್ಡಿ ಮುಂತಾದವರ ಮೇಲೆ ಬಂಧನದ ಆಜ್ಞೆಯನ್ನು ಜಾರಿಮಾಡಿದರು. ನಾವು ಸತ್ಯಾಗ್ರಹ ಮಾಡುತ್ತಿರುವುದು ಸರ್ಕಾರದ ಸ್ಥಳವಲ್ಲ ಖಾಸಗಿ ಜಮೀನು ಧ್ವಜಾರೋಹಣ ಮಾಡುವುದು ನಮ್ಮ ಹಕ್ಕು, ನಮ್ಮ ಹಕ್ಕನ್ನು ಮುರಿಯುವ ಸರ್ಕಾರದ ಆಜ್ಞೆಗೆ ಧಿಕ್ಕಾರ ನಾವು ಸತ್ಯಾಗ್ರಹವನ್ನು ಮುಂದುವರೆಸಿ ಧ್ವಜಾರೋಹಣವನ್ನು ಮಾಡುತ್ತೇವೆ. ಹಾಗೂ ಈಗಿರುವ ಯಾವ ಕಾರ್ಯಕ್ರಮವನ್ನು ನಿಲ್ಲಿಸುವುದಿಲ್ಲ ಎಂದು ಪೋಲಿಸರಿಗೆ ಖಡಾಖಂಡಿತವಾಗಿ ಹೇಳಿಬಿಟ್ಟರು. ಇದರಿಂದ ಸೆಕ್ಷನ್‌ಜಾರಿ ಮಾಡಿದರೂ ಬ್ಯಾನ್ ಮುರಿಯಲೇ ಬೇಕು ಅದನ್ನು ನಿಲ್ಲಿಸಬಾರದು ಎಂದು ಶ್ರೀಮತಿ ಟಿ.ಸುನಂದಮ್ಮ, ಯಶೋಧರದಾಸಪ್ಪ ಮೊದಲಾದ ಸ್ತ್ರೀಯರು ಧ್ವನಿಗೂಡಿಸಿ ಸುನಂದಮ್ಮನವರು ನಾನೇ ಧ್ವಜಾರೋಹಣವನ್ನು ಮಾಡುತ್ತೇನೆ. ಅರೆಸ್ಟ್ ಮಾಡಲಿ ಎಂದು ದಿಟ್ಟ ನಿಲುವು ಮತ್ತು ದೇಶಾಭಿಮಾನದಿಂದ ಮೆರೆದರು ಹಾಗೂ ಪ್ರತಿನಿತ್ಯ ಯಾರು ಯಾರು ಧ್ವಜಾರೋಹಣ ಮಾಡಬೇಕು ಮತ್ತು ಹೇಗೆ ಧ್ವಜಕಾಯಬೇಕು ಎಂಬುದರ ಬಗೆಗೆ ನಿಶ್ಚಿತವಾದ ತೀರ್ಮಾನವನ್ನು ಕೈಗೊಳ್ಳಲಾಯಿತು. ಮಧ್ಯರಾತ್ರಿಯ ಸಮಯದಲ್ಲಿ ಬಂದೂಕುದಾರಿಗಳಾದ 600 ಜನ ರಿಸರ್ವ್ ಪೋಲಿಸ್‌ನವರು ಬಲವಾದ ಲಾಠಿಯನ್ನಿಡಿದುಕೊಂಡು ಗೋಲಿಬಾರ್ ಮಾಡಬಹುದೆಂದು ಸುದ್ದಿ ಹರಡಿತು. ಜನರಿಗೆ ಧೈರ್ಯ ಹೇಳಿ ಯಾವ ಗಲಾಟೆಯನ್ನು ಮಾಡದೆ ಶಾಂತಿಯಿಂದಿರಬೇಕೆಂದು ಅಲ್ಲಿನ ಮುಖಂಡರು ಕೇಳಿಕೊಂಡರು.[9]

ಬಹಿರಂಗ ಅಧಿವೇಶನಕ್ಕಾಗಿ ರಚಿತವಾಗಿದ್ದ ಆವರಣದ ಮುಂಭಾಗದಲ್ಲಿ ಧ್ವಜ ಮೈದಾನವು ಸಿದ್ಧವಾಗಿತ್ತು. ಕಳಶದ ಸಮೇತ 60 ಅಡಿ ಎತ್ತರದ ಧ್ವಜ ಸ್ತಂಭವು ಪೂಜಾಕ್ರಮಗಳಿಂದ ನಡೆಯಲ್ಪಟ್ಟಿತು. ಅದರ ಸುತ್ತಲೂ ಒಂದೂವರೆ ಅಡಿ ಎತ್ತರದ ವಿಶಾಲವಾಗಿದ್ದ ವೇದಿಕೆಯನ್ನು ನಿರ್ಮಿಸಿದ್ದರು. ವೇದಿಕೆಯನ್ನು ಧ್ವಜಸ್ತಂಭವನ್ನು ಖಾಲಿ ಬಟ್ಟೆಯಿಂದ ಶೃಂಗರಿಸಿ ಧ್ವಜಸ್ತಂಭವನ್ನು ಸ್ವಯಂ ಸೇವಕರು ಸರ್ಪ ಕಾವಲಿನಂತೆ ಕಾದಿದ್ದರು. ಶಿವಪುರ ಧ್ವಜ ಸತ್ಯಾಗ್ರಹದ ವಿಶಾಲವಾದ ಮೈದಾನ ರಣರಂಗವನ್ನು ಜ್ಞಾಪಿಸುತ್ತಿತ್ತು. ಒಂದು ಕಡೆ ಸುಮಾರು 40 ಸಾವಿರ ಪ್ರೇಕ್ಷಕವೃಂದ ಎಲ್ಲರೂ ಅಸಹಾಯಕ ಸ್ತ್ರೀಪುರುಷರು, ನಿರಾಯುಧರು. ಬಹಳಷ್ಟು ಮಂದಿ ಏನೂ ಅರಿಯದ ಮುಗ್ದರಾದ ಹಳ್ಳಿಗರು .ಇವರ ಕೈಯಲ್ಲೂ

ಆಯುಧಗಳಿಲ್ಲ. ಇದ್ದ ಆಯುಧಗಳೆಂದರೆ ಸತ್ಯ, ಅಹಿಂಸೆ. ಈ ಜನ ಸಮುದಾಯದ ಎದುರಿಗೆ ಇನ್ನೊಂದು ಕಡೆ ಮಾರಕಾಸ್ತ್ರಗಳನ್ನಿಡಿದು ನಿಂತಿರುವ 600 ಜನರ ಪೋಲಿಸ್ ಮೀಸಲುಪಡೆ ಲಾಠಿದಾರಿಗಳಾದ ಸಾವಿರ ಪೋಲಿಸರು ಜೊತೆಗೆ ಜನ ಸಮೂಹ ಮೊದಲೇ ಯಾರೇ ದುಡುಕಿದರೂ ಇಬ್ಬರಿಗೂ ಅಪಾಯ ಎಂಬ ಮೈನವಿರೇಸುವ ವಿಚಿತ್ರ ಪ್ರಸಂಗ ಪ್ರಾಪ್ತವಾಯಿತು.

ಕಾಂಗ್ರೆಸ್ ಅಧ್ಯಕ್ಷರಾದ ಟಿ. ಸಿದ್ಧಲಿಂಗಯ್ಯನವರು ವೇದಿಕೆಯನ್ನು ಹತ್ತಿದ ಕೂಡಲೇ ಡಿಸ್ಟ್ರಿಕ್ ಪೋಲಿಸ್ ಸೂಪರಿಡೆಂಟ್, ಮಂಡ್ಯದ ಸಬ್ ಡಿವಿಷನ್ ಆಪೀಷರ್ ಮತ್ತು ಸಬ್‌ಇನ್ಸ್‌ಪೆಕ್ಟರ್‌ಗಳು ಧ್ವಜ ವೇದಿಕೆಯ ಒಳಾಂಗಣದಲ್ಲಿ ಸತ್ಯಾಗ್ರಹಿಗಳು ಇದ್ದರೂ ನುಗ್ಗಿ ಧ್ವಜ ಸ್ತಂಭದ ಒಳಗೆ ಬಂದರು. ಫ್ರೆಂಚ್‌ರಾಕ್ಸ್ ಪೋಲಿಸ್ ಸೂಪರಿಡೆಂಟರಾದ ಮತ್ತೋಜಿರಾವ್ ಸಿಂದ್ಯಾ ಅವರು ಟಿ.ಸಿದ್ದಲಿಂಗಯ್ಯನವರ ಹತ್ತಿರ ಬಂದು ಪ್ರತಿಬಂಧಕಾಜ್ಞೆಯನ್ನು ಜ್ಞಾಪಿಸಿ ಧ್ವಜಾರೋಹಣ ಮಾಡಕೂಡದೆಂದರು. ನಿಯಮಗಳನ್ನು ಉಲ್ಲಂಘಿಸಿದರೆ ಹೊಡೆತ, ಗೋಲಿಬಾರ್ ಆಗುವ ಸಂಭವವಿದೆ ಹಾಗೂ ಧಾರುಣ ಪರಿಸ್ಥಿತಿಯಾಗುತ್ತದೆ ಎಂದು ಎಚ್ಚರಿಕೆಯನ್ನು ನೀಡಿದರು. ಆದರೂ ಪಿ.ಸುನಂದಮ್ಮನವರು ವಂದೇ ಮಾತರಂ ಮತ್ತು ರಾಷ್ಟ್ರಗೀತೆಯನ್ನು ಹಾಡಿದರು. ಆನಂತರ ಟಿ.ಸಿದ್ಧಲಿಂಗಯ್ಯನವರು ಹಾಗೂ ಸ್ವಯಂ ಸೇವಕರ ನಾಯಕರಾದ ಎಂ.ಎನ್‌ಜೋಯಿಷ್‌ರವರು ಧ್ವಜಾರೋಹಣ ಮಾಡಲು ಯತ್ನಿಸಿದರು. ಪೋಲಿಸರ ಸರ್ಪಗಾವಲಿದ್ದರೂ ಲೆಕ್ಕಿಸದೇ ಧ್ವಜ ಹಾರಿಸಲು ಮುಂದಾದಾಗ ನ್ಯಾಯಾಧೀಶರಿಗೂ ಅವರಿಗೂ ವಾದಗಳು ನಡೆದವು ಎಂ.ಎನ್.ಜೋಯಿಷರ ಸಹಾಯದಿಂದ ಟಿ.ಸಿದ್ದಲಿಂಗಯ್ಯನವರು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಧ್ವಜಾರೋಹಣವನ್ನು ಮಾಡಿದರು. ಪಿ.ಸುನಂದಮ್ಮನವರು ಧ್ವಜಗೀತೆಯನ್ನು ಹಾಡಿದರು. ಆ ಗೀತೆ ಎಲ್ಲರಿಗೂ ಹೊಸ ಸ್ಫೂರ್ತಿಯನ್ನು ನೀಡಿತು ಹರ್ಷದಿಂದ ಜನರ ಜಯಘೋಷಗಳು ಮೊಳಗಿದವು ನಂತರ ಟಿ.ಸಿದ್ದಲಿಂಗಯ್ಯ ಮತ್ತು ಎಂ.ಎನ್‌ಜೋಯಿಷರನ್ನು ದಸ್ತಗಿರಿ ಮಾಡಿದರು. ಅಧ್ಯಕ್ಷರು ತಮ್ಮ ಸ್ಥಾನಕ್ಕೆ ಹಂಗಾಮಿಯಾಗಿ ಹೆಚ್.ಸಿ.ದಾಸಪ್ಪನವರನ್ನು ನೇಮಿಸಿ ಪೋಲಿಸರೊಡನೆ ಹಸನ್ಮುಖಿಯಾಗಿ ಹೊರಟರು. ಆಗ ಜನರಲ್ಲಿ ಅಸಮಾಧಾನ ಉಂಟಾಗಿ ಹೆಚ್ಚಿನ ಗಲಭೆ ಉಂಟಾಯಿತು. ಪರಿಸ್ಥಿತಿ ಬಿಗಡಾಯಿಸುವ ಮೊದಲೇ ಜಿಲ್ಲಾಧಿಕಾರಿ ಶ್ರೀ ಮೇಕ್ರಿಯವರು ಶಾಂತವಾಗಿರಬೇಕೆಂದು ಕೇಳಿಕೊಂಡರು ಜನರನ್ನು ಸಮಾಧಾನಪಡಿಸುವಂತೆ ಮುಖಂಡರಿಗೆ ಸೂಚಿಸಿದರು. ಧ್ವಜವನ್ನು ಇಳಿಸುವವರೆಗೂ ಕಣ್ಣಲ್ಲಿ ಕಣ್ಣಿಟ್ಟು ಕಾಯುವ ಹೊಣೆ ಮುಖಂಡರದ್ದಾಗಿತ್ತು ಧ್ವಜಸ್ತಂಭದ ವೇದಿಕೆಯ ಮೇಲೆ ಸ್ತ್ರೀ ಸ್ವಯಂ ಸೇವಕಿಯರು ಹಲವು ಮುಖಂಡರು ಧ್ವಜದ ಸುತ್ತಲೂ ಕಾವಲು ಕುಳಿತು ಧ್ವಜಾರೋಹಣ ಸಮಾರಂಭವು ಅಧಿವೇಶನ ಕಾಲದ ಮೂರು ದಿನ ತಪ್ಪದೇ ಜರುಗಿತು ಜನ ಸಮೂಹವು ಲಾವಣಿ ಮತ್ತು ರಾಷ್ಟ್ರಗೀತೆಯನ್ನು ಕೇಳಿಕೊಂಡು ಬಿಸಿಲನ್ನು ಲೆಕ್ಕಿಸದೆ ಸಂಜೆ ಆರು ಗಂಟೆಗೆ ಸರಿಯಾಗಿ ಧ್ವಜಾರೋಹಣ ನಡೆಯಿತು. ಧ್ವಜಾರೋಹಣ ನಿಮಿತ್ತವಾಗಿಯೇ[10] ಎರಡನೇ ದಿನ ಹೆಚ್.ಸಿ ದಾಸಪ್ಪ, ವಿ.ವೆಂಕಟಪ್ಪ ಮತ್ತು ಚಂಗಲರಾಯರೆಡ್ಡಿ ಇವರನ್ನು ಹಾಗೂ ಮೂರನೇ ದಿನ ಕೆ.ಟಿ.ಭಾಷ್ಯಂ, ಹೆಚ್.ಸಿದ್ದಯ್ಯ ಮತ್ತು ಬಳ್ಳಾರಿ ಸಿದ್ದಮ್ಮನವರನ್ನು ಬಂಧಿಸಿದ್ದರು.[11] ಆದರೂ ಕೂಡ ಅಧಿಕಾರಿಗಳು ತಾಳ್ಮೆ ಸಂಯಮ ಮತ್ತು ಉದಾರತೆಯಿಂದ ನಡೆದುಕೊಂಡರು ಈ ಅಧಿವೇಶನದಲ್ಲಿ ಭಾಗವಹಿಸಿದ ಅನೇಕ ಕಾಂಗ್ರೆಸ್ ಸದಸ್ಯರು ಮತ್ತು ನಾಯಕರು ಅದರಲ್ಲೂ ಜಿಲ್ಲಾ ನ್ಯಾಯಧೀಶರಾಗಿದ್ದ ಮೇಕ್ರಿಯವರ ನಡತೆಯನ್ನು

ರಾಷ್ಟ್ರಧ್ವಜಾರೋಹಣದ ವೇಳೆಯಲ್ಲಿ ನಡೆದ ಕಾಂಗ್ರೆಸ್ ನಾಯಕರ ದಸ್ತಗಿರಿ ದೃಶ್ಯವು ವರ್ಣಾತೀತಾವಾಗಿತ್ತು ಮೈದಾನದಲ್ಲಿ ಸೇರಿದ್ದ ಜನರು ಶಾಂತಿಯಿಂದಿದ್ದರು ಧ್ವಜಾರೋಹಣ ಮಾಡಲು ನಾಯಕರು ಪ್ರಯತ್ನಿಸುತ್ತಿದ್ದಾಗ ಅವರಿಗೂ ಪೋಲಿಸ್ ಅಧಿಕಾರಿಗಳಿಗೂ ಸಂಭಾಷಣೆ ಶಾಂತಿಯುತವಾಗಿಯೇ ನಡೆಯುತಿತ್ತು.[12]

ವಿಷಯ ನಿಯಾಮಕ ಸಮಿತಿಯ ಸಭೆಯು ಅದಕ್ಕಾಗಿ ನಿರ್ಮಾಣವಾಗಿದ್ದ ಸಭಾಂಗಣದಲ್ಲಿ ನಡೆಯಿತು. ಅಧ್ಯಕ್ಷರಾದ ಶ್ರೀ ಹೆಚ್.ಸಿ.ದಾಸಪ್ಪನವರು ಧ್ವಜರಕ್ಷಣೆಗೆ ಕುಳಿತಿದ್ದರಿಂದ ಅವರ ಪರವಾಗಿ ಅಧ್ಯಕ್ಷತೆಯನ್ನು ಕೆ.ಟಿ.ಬಾಷ್ಯಂರವರು ವಹಿಸಿ ಕಾರ್ಯಕಲಾಪವನ್ನು ಮಾಡಿಕೊಟ್ಟರು. ಬಹಳ ಕಾಲದವರೆಗೆ ಅನೇಕ ವಿಷಯಗಳು ಚರ್ಚೆಯಾಗಿ ಬಹಿರಂಗ ಅಧಿವೇಶನದಲ್ಲಿ ಮಂಡಿಸಲು ಕೆಲವು ನಿರ್ಣಯಗಳು ಸಿದ್ದವಾದವು. ಅವುಗಳಲ್ಲಿ ಮುಖ್ಯವಾಗಿ 18 ನಿರ್ಣಯಗಳು ಬಹುಮತದಿಂದ ಅಂಗೀಕೃತವಾದವು.[13] ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿಯಲ್ಲಿ ಶಿವಪುರದ ಕಾಂಗ್ರೆಸ್ ಅಧೀವೇಶನವು ಒಂದು ಮೈಲಿಗಲ್ಲಾಗಿ ಶಿವಪುರದಲ್ಲಿ ಗಲಭೆಯುಂಟಾಗುತ್ತದೆಂದು ಎಣಿಸಿ ಆ ಸಂದರ್ಭದಲ್ಲಿ ಕಾಂಗ್ರೆಸನ್ನು ಸದೆಬಡಿಯಲು ಸರ್ಕಾರದ ಅಧಿಕಾರಿಗಳು ಎಲ್ಲಾ ಸಿದ್ದತೆಗಳನ್ನು ಮಾಡಿಕೊಂಡಿದ್ದರು. ಆದರೆ ಅಧಿವೇಶನ ಮೂರು ದಿನಗಳಲ್ಲಿಯೂ ಕಾಂಗ್ರೆಸ್ ಸದಸ್ಯರುಗಳು ಕುಪಿತಗೊಳ್ಳದೆ ಶಾಂತಿಯಿಂದ ಅಧಿವೇಶನವನ್ನು ಮುಗಿಸಿದರು. ಇತರ ಪ್ರದೇಶಗಳಿಂದ ಬಂದಿದ್ದ ಕಾಂಗ್ರೆಸ್ಸಿಗರಿಗೂ ತಮ್ಮ ತಮ್ಮ ಊರಿಗಳಲ್ಲಿಯೂ ಧ್ವಜಾರೋಹಣ ಮಾಡಬೇಕೆಂಬ ಸೂಚನೆ ನೀಡಲಾಯಿತು. ಸಂಸ್ಥಾನದಲ್ಲೆಲ್ಲಾ ಹರಡಿದ ಈ ಚಳವಳಿಯನ್ನು ಧ್ವಜ ಸತ್ಯಾಗ್ರಹ ಎಂದು ಕರೆದರು. ಶಿವಪುರದಲ್ಲಿ ಸತ್ಯಾಗ್ರಹ ಆಶ್ರಮವೊಂದನ್ನು ತೆರೆದು ಸತ್ಯಾಗ್ರಹ ಪ್ರಾರಂಭೋತ್ಸವವನ್ನು ಗುಂಡಪ್ಪಗೌಡರು ನೇರವೆರಿಸಿದರು ಮತ್ತು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಧ್ವಜಾರೋಹಣ ಮಾಡಿದರು. ಸ್ವಾಗತ ಸಮಿತಿಯ ಆಶ್ರಯದಲ್ಲಿ ಒಂದು ತಿಂಗಳ ಕಾಲವೂ ಧ್ವಜ ಸತ್ಯಾಗ್ರಹ ನಡೆಯಿತು.[13] ಹೀಗೆ ಶಿವಪುರದಲ್ಲಿ ಗಳಿಸಿಕೊಂಡ ಅನುಭವ ಸಂಸ್ಥಾನದ ಪಟ್ಟಣ, ಹಳ್ಳಿಗಳ ಮನೆ ಮನೆಗೂ ತಲುಪಿತು. ಸಾವಿರಾರು ಸಂಖ್ಯೆಯಲ್ಲಿ ಸ್ತ್ರೀ ಪುರುಷರು, ಶಾಲಾ ಕಾಲೇಜುಗಳಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು, ರೈತರು, ಕೂಲಿಕಾರರು, ದಲಿತರು ಮತ್ತು ನಾನಾ ಹುದ್ದೆಗಳಲ್ಲಿದ್ದ ನೌಕರರು ಭಾಗವಹಿಸುವುದರ ಮೂಲಕ ಶಿವಪುರ ಧ್ವಜ ಸತ್ಯಾಗ್ರಹವನ್ನು ಯಶಸ್ವಿಗೊಳಿಸಿದರು. ಇದು ಇತಿಹಾಸದಲ್ಲಿ ತನ್ನದೇಯಾದ ಪ್ರಾಮುಖ್ಯತೆಯನ್ನು ಪಡೆದಿದ್ದು, ಶಿವಪುರ ದ್ವಜ ಸತ್ಯಾಗ್ರಹ ಎಂದೇ ಪ್ರಸಿದ್ಧವಾಗಿದೆ.

**ಕೊನೆಟಿಪ್ಪಣಿಗಳು**

1. ಲಿಂಗಯ್ಯ.ಡಿ. (1979). ಶಿವಪುರ ಧ್ವಜ ಸತ್ಯಾಗ್ರಹ. ಶಿವಪುರ ಧ್ವಜ ಸತ್ಯಾಗ್ರಹ ಸ್ಮಾರಕಟ್ರಸ್ಟ್, ಬೆಂಗಳೂರು.
2. ವೇಣುಗೋಪಾಲ್, ತಿಮ್ಮನಹಳ್ಳಿ. (2010). ರೈತರು: ಮೈಸೂರು ಅಧಿಕಾರಿಶಾಹಿ ಮತ್ತು ರಾಷ್ಟ್ರೀಯತೆ 1881–1947. ಧಾತ್ರಿ ಪ್ರಕಾಶನ, ಬೆಂಗಳೂರು.
3. ಲಿಂಗಯ್ಯ.ಡಿ. (1979). ಪೂರ್ವೋಕ್ತ.,
4. ವೀರತಪ್ಪ ಕೆ. (1976). ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ. ವಿಜಯರವಿ ಪ್ರಕಾಶನ, ಬೆಂಗಳೂರು.
5. ವೀರತಪ್ಪ ಕೆ. (1976). ಪೂರ್ವೋಕ್ತ,.
6. ಲಿಂಗಯ್ಯ.ಡಿ. (1979). ಪೂರ್ವೋಕ್ತ,.
7. ಅದೇ,.
8. ಅದೇ,.
9. ವೀರತಪ್ಪ ಕೆ. (1976). ಪೂರ್ವೋಕ್ತ,.
10. ನಾಗರತ್ನಮ್ಮ ಎಸ್. (2009.) ತುಮಕೂರು ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ. ದೇಶಿ ಪ್ರಕಾಶನ, ಬೆಂಗಳೂರು.
11. ವೀರತಪ್ಪ ಕೆ. (1976). ಪೂರ್ವೋಕ್ತ,.
12. ಲಿಂಗಯ್ಯ.ಡಿ. (1979). ಪೂರ್ವೋಕ್ತ,.
13. ವೀರತಪ್ಪ ಕೆ. (1976). ಪೂರ್ವೋಕ್ತ,.